**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ**

**ಸಿ ಸಿ ನಂಃ 72/2024**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿತರುಃ

1. ನಾರಾಯಣ ಮೇಸ್ತ,
   ಪ್ರಾಯಃ 54 ವರ್ಷ, ಉಃ ಆಚಾರಿಕೆಲಸ,
   ಸಾಃ ಮನೆ ನಂಃ 1610, ಸೆಂಟ್ ಇಗ್ನೇಶಿಯಸ್,
   ಆಸ್ಪತ್ರೆ ಹತ್ತಿರ, ಪಭಾತನಗರ, ತಾಃ ಹೊನ್ನಾವರ.
2. ಶ್ರೀಮತಿ ರಾಧಾ ಕೊಂ ಕೃಷ್ಣ ಮೇಸ್ತಾ,
   ಪ್ರಾಯಃ 52 ವರ್ಷ, ಉಃ ಮನೆಕೆಲಸ,
   ಸೆಂಟ್ ಇಗ್ನೇಶಿಯಸ್, ಆಸ್ಪತ್ರೆ ಹತ್ತಿರ, ಪಭಾತನಗರ, ತಾಃ ಹೊನ್ನಾವರ.
3. ಮಣಿಕಂಠ ತಂದೆ ಕೃಷ್ಣ ಮೇಸ್ತಾ,
   ಪ್ರಾಯಃ 25 ವರ್ಷ, ಉಃ ಚಾಲಕ, ,
   ಸಾಃ ಸೆಂಟ್ ಇಗ್ನೇಶಿಯಸ್,
   ಆಸ್ಪತ್ರೆ ಹತ್ತಿರ, ಪಭಾತನಗರ, ತಾಃ ಹೊನ್ನಾವರ.
4. ಶ್ರೀಮತಿ ಅಶ್ವಿನಿ ಕೊಂ ರವೀಂದ್ರ ಚಾರಿ,
   ಪ್ರಾಯಃ28 ವರ್ಷ, ಉಃ ಮನೆವಾರ್ತೆ,
   ಸಾಃ 1680, ಸೆಂಟ್ ಇಗ್ನೇಶಿಯಸ್,
   ಆಸ್ಪತ್ರೆ ಹತ್ತಿರ, ಪಭಾತನಗರ, ತಾಃ ಹೊನ್ನಾವರ.
5. ಶ್ರೀನಿವಾಸಾ ತಂದೆ ಭಾಸ್ಕರ ಮೇಸ್ತಾ,
   ಪ್ರಾಯಃ 40 ವರ್ಷ, ಉಃ ಆಚಾರಿ ಕೆಲಸ,
   ಸಾಃ ಬರ್ನಕೇರಿ, ಖರ್ವಾ, ತಾಃ ಹೊನ್ನಾವರ.
6. ರಾಘವೇಂದ್ರ ತಂದೆ ಗೋಪಾಲ ಆಚಾರಿ,
   ಪ್ರಾಯಃ46 ವರ್ಷ, ಉಃ ಆಚಾರಿ ಕೆಲಸ,
   ಸಾಃ ಎಸ್.ಎನ್ ನಗರ 1 ನೇ ಕ್ರಾಸ್ ಸಾಗರ, ಶಿಮೊಗ್ಗ ಜಿಲ್ಲೆ.
7. ಭಾಸ್ಕರ ತಂದೆ ವೆಂಕಟೇಶ ಆಚಾರಿ,
   ಪ್ರಾಯಃ40 ವರ್ಷ, ಉಃ ಆಚಾರಿ ಕೆಲಸ,
   ಸಾಃ ಎಸ್.ಎನ್ ನಗರ 1 ನೇ ಕ್ರಾಸ್ ಸಾಗರ, ಶಿಮೊಗ್ಗ ಜಿಲ್ಲೆ.
8. ಲೋಕೇಶ ತಂದೆ ವೆಂಕಟೇಶ ಆಚಾರಿ,
   ಪ್ರಾಯಃ43 ವರ್ಷ, ಉಃ ಆಚಾರಿ ಕೆಲಸ,
   ಸಾಃ ಎಸ್.ಎನ್ ನಗರ 1 ನೇ ಕ್ರಾಸ್ ಸಾಗರ, ಶಿಮೊಗ್ಗ ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ದಿನಾಂಕಃ08-10-2023 ರಂದು ಬೆಳಿಗ್ಗೆಃ10-30 ಗಂಟೆ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊನ್ನಾವರ ತಾಲೂಕಿನ ಪ್ರಭಾತನಗರದ ಸೆಂಟ್ ಇಗ್ನೇಶಿಯಸ್ ಆಸ್ಪತ್ರೆ ಹತ್ತಿರ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮ ಕೂಟ ರಚಿಸುವ ಮೂಲಕ ಭಾ.ದಂ.ಸಂ. ಕಲಂ **143, ಸಹವಾಚಕ ಕಲಂ 149** ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಎರಡನೆಯದಾಗಿ ಆರೋಪಿತರಾದ ನೀವೆಲ್ಲರೂ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮಕೂಟ ರಚಿಸಿ ದೊಂಬಿಯನ್ನು ಉಂಟುಮಾಡುವ ಮೂಲಕ **ಭಾ.ದಂ.ಸಂ ಕಲಂ 147 ಸಹವಾಚಕ ಕಲಂ 149** ರನ್ವಯ ಶಿಕ್ಷಾರ್ಹ ಆಪರಾಧ ಮಾಡಿರುತ್ತಿರಿ .

ಮೂನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿ ಅವರ ಹೆಂಡತಿಯಾದ 4 ನೇ ಆರೋಪಿತಳು ಪಿರ್ಯಾದಿಯೊಂದಿಗೆ ಸಂಸಾರ ನಡೆಸಲು ಅವರ ಊರಾದ ಚೌಗಮ್ ರೋಡ್, ಪರವರಿಂಮ್ ಬಾಡೆರ್ಸ್ ಗೋವಾ ರಾಜ್ಯಕ್ಕೆ ಬರಲು ಒಪ್ಪಿದ್ದರಿಂದ ಕುಟುಂಬಸ್ಥರೊಂದಿಗೆ ಮಾತುಕತೆ ಮಾಡಿ ಕರೆದುಕೊಂಡು ಹೋಗಲು ಚಾಸಾ-4 ರಿಂದ 11 ನೇಯವರ ಜೊತೆ ಬಂದಾಗ ಪಿರ್ಯಾದಿ ಮಾವನ್ನು 1 ನೇ ಆರೋಪಿತನ ಹತ್ತಿರ ಅವರ ಹೆಂಡತಿ ಹಾಗೂ ಮಗಳನ್ನು ಅವರ ಮನೆಗೆ ಕಳಿಸಿ ಕೊಡುವಂತೆ ಹೇಳಿದಾಗ 1 ನೇ ಆರೋಪಿತನು ಅವಳಿಗೆ ಗೋವಾಕ್ಕೆ ಕಳಿಸಿ ಕೊಡುವುದಿಲ್ಲ ಎಂದು ಹೇಳಿದಾಗ ಚಾಸಾ-4 ಹಾಗೂ 5 ನೇಯವರು ಮಕ್ಕಳು ಒಳ್ಳೆಯ ರೀತಿಯಿಂದ ಸಂಸಾರ ಮಾಡಲಿ ಅವರ ಜೊತೆ ಸೊಸೆ ಮೊಮ್ಮಗಳನ್ನು ಕಳಿಸಿ ಕೊಡಿ ಎಂದು ಹೇಳಿದಾಗ 1 ನೇ ಆರೋಪಿತನು ಒಮ್ಮೆಲೆ ಸಿಟ್ಟಿನಿಂದ ಪಿರ್ಯಾದಿಯನ್ನು ಉದ್ದೇಶಿಸಿ ನಿಮಗೆ ಒಂದು ಸಲ ಹೇಳಿದರೆ ಅರ್ಥವಾಗುವುದಿಲ್ಲ ರಂಡೇಪುತಾ, ಬೋಳಿಮಗ, ಬೇವರ್ಸಿ, ನಾಲಾಯಕ್, ಎಂದು ಜೋರಾಗಿ ಬೈದು ಹಾಗೂ 4 ನೇ ಆರೋಪಿತಳಾದ ಪಿರ್ಯಾದಿ ಹೆಂಡತಿ ಕೂಡ ಪಿರ್ಯಾದಿಗೆ ಚೆಡಿಯಾಚೋ ಬೇವರ್ಸಿ ಅಂತ ಕೆಟ್ಟ ಕೆಟ್ಟದ್ದಾಗಿ ಬೈದು ಅವರಿಗೆ ಅವಮಾನ ಆಗುವಂತೆ ನಿಂದಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಯವರು ಮನೆಯ ಒಳಗಿದ್ದ ಅವರ ಮಗುವನ್ನು ನೋಡಲು ಹೋದಾಗ ಆರೋಪಿತರಾದ ನೀವು ಪಿರ್ಯಾದಿ ಅವರನ್ನು ಅಡ್ಡಗಟ್ಟಿ ಅವರು ಹಕ್ಕುಳ್ಳ ದಿಕ್ಕಿನಲ್ಲಿ

ಸಂಚರಿಸದಂತೆ ಕಾನೂನು ಬಾಹಿರವಾಗಿ ತಡೆದು ನಿಗ್ರಹಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 341 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಗೆ ದೂಡಾಡಿ ಮುಷ್ಟಿಯಿಂದ ಮೈಮೇಲೆ ಗುದ್ದಿ ಕೈಯಿಂದ ಪರಚಿ ಸಾದಾ ಸ್ವರೂಪದ ಗಾಯಪಡಿಸುವ ಮೂಲಕ, ಭಾ.ದಂ.ಸಂ.ಕಲಂ **323 ಸಹ ಕಲಂ 149** ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಆನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 5 ನೇ ಆರೋಪಿತನಾದ ನೀನು ಪಿರ್ಯಾದಿಗೆ ಮನೆಯ ಹೊರಗಿದ್ದ ಒಂದು ಕಟ್ಟಿಬಡಿಗೆಯನ್ನು ತಂದು ಫಿರ್ಯಾದಿ ಮೈಮೇಲೆ ಹೊಡೆದು ಸಾದಾ ಸ್ವರೂಪದ ಗಾಯಪಡಿಸುವ ಮೂಲಕ, ಭಾ.ದಂ.ಸಂ.ಕಲಂ **324 ಸಹ ಕಲಂ** 149 ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಏಳನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿತನಾದ ನೀನು ಕೈಯಲ್ಲಿ ಚಾಕು ಹಾಗೂ 3 ನೇ ಆರೋಪಿತನು ಕೈಯ್ಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಪಿರ್ಯಾದಿಗೆ ನೀವು ಈಗ ಇಲ್ಲಿಂದ ಹೋಗದಿದ್ದರೆ ನಿಮಗೆ ಇಲ್ಲೇ ಕತ್ತಿರಿಸಿ ಹಾಕುತ್ತೇವೆ ಹಾಗೂ 1 ರಿಂದ 3 ನೇ ಆರೋಪಿತರು ಪಿರ್ಯಾದಿಗೆ ನೀವು ಮತ್ತೆ ನಮ್ಮ ಮನೆಗೆ ಬಂದರೆ ನಿಮ್ಮ ಮೇಲೆ ಕೌಟುಂಬಿಕ ದೌರ್ಜನ್ಯ ಪ್ರಕರಣ ಹಾಕುತ್ತೇವೆ ಎಂದು ಜೀವ ಬೆದರಿಕೆ ಹಾಕುವ ಮೂಲಕ ನಿಮ್ಮ ಮೇಲೆ **ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 149** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿಗೆ ಹೊಡೆಯಲು ಉಪಯೋಗಿಸಿದ ಕಟ್ಟಿಗೆ ಬಡಿಗೆ ಹಾಗೂ ಬೆದರಿಸಲು ಉಪಯೋಗಿಸಿದ ಚಾಕು ಹಾಗೂ ಕತ್ತಿಯನ್ನು ಪುರಾವೆಗೆ ಸಿಗದಂತೆ ನಾಶ ಪಡಿಸಿದ ಆರೋಪದ ಮೇಲೆ ನೀವು **ಭಾ.ದಂ.ಸಂ.ಕಲಂ 201 ಸಹವಾಚಕ ಕಲಂ 149** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆಃ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

7 ನೇ ಆರೋಪಿಯ ಉತ್ತರಃ

8 ನೇ ಆರೋಪಿಯ ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

7 ನೇ ಆರೋಪಿಯ ಉತ್ತರಃ

8 ನೇ ಆರೋಪಿಯ ಉತ್ತರಃ

ದಿನಾಂಕಃ – –2024 **ಪ್ರಧಾನ ಪ್ರ.ದ.ನ್ಯಾಯದಂಡಾಧಿಕಾರಿ, ಹೊನ್ನಾವರ.**

ಆರೋಪಿತರುಃ

| | | |
|---|---|---|
| 1. | ನಾರಾಯಣ ಮೇಸ್ತ, | |
| 2. | ಶ್ರೀಮತಿ ರಾಧಾ ಕೊಂ ಕೃಷ್ಣ ಮೇಸ್ತಾ, | |
| 3. | ಮಣಿಕಂಠ ತಂದೆ ಕೃಷ್ಣ ಮೇಸ್ತಾ, | |
| 4. | ಶ್ರೀಮತಿ ಅಶ್ವಿನಿ ಕೊಂ ರವೀಂದ್ರ ಚಾರಿ, | |
| 5. | ಶ್ರೀನಿವಾಸಾ ತಂದೆ ಭಾಸ್ಕರ ಮೇಸ್ತಾ, | |
| 6. | ರಾಘವೇಂದ್ರ ತಂದೆ ಗೋಪಾಲ ಆಚಾರಿ, | |
| 7. | ಭಾಸ್ಕರ ತಂದೆ ವೆಂಕಟೇಶ ಆಚಾರಿ, | |
| 8. | ಲೋಕೇಶ ತಂದೆ ವೆಂಕಟೇಶ ಆಚಾರಿ, | |